ಈ ನಾಲ್ಕೂ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಗಳೆಂದು ವರ್ಗೀಕೃತಗೊಂಡಿದ್ದು, ಲೋಕೋಪಯೋಗಿ ಇಲಾಖೆಯ ಅಸ್ತಿತ್ವದಲ್ಲಿ ಇರುತ್ತದೆ

ಆ) ಈ ರಸ್ತೆಗಳ ನಿರ್ವಹಣೆ ಮತ್ತು 'ದುರಸ್ತಿ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ

ಇ) ಪ್ರಸ್ತುತ ಸಾಲಿಗೆ ರೂ 2 09 ಲಕ್ಷ ಬಿಡುಗಡೆಯಾಗಿದೆ

1483 (2200) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಕ್ಷೇತ್ರ ವ್ಯಾಪ್ತಿಯಲ್ಲಿರುವ ಮಸೀದಿ, ಅದರ ಕಂಪೌಂಡ ಈದಗಾ ಮತ್ತು ಸ್ಮಶಾನದ ಕಂಪೌಂಡಗಳ ಅಭಿವೃದ್ಧಿಯಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಯಾವ ಅವಧಿಯೊಳಗಾಗಿ ಅಭಿವೃದ್ಧಿಪಡಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು, ಕುಣಿಗಲ್ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮಸೀದಿ, ಅದರ ಕಂಪೌಂಡ ಈದಗಾ ಮತ್ತು ಸ್ಮಶಾನದ ಕಂಪೌಂಡಗಳ ಅಭಿವೃದ್ಧಿಗಾಗಿ ಈ ಕೆಳಕಂಡಂತೆ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ವಿವರ

ಕ್ರಮ ಸಂ	ವಕ್ಫ ಸಂಸ್ಥೆಯ ಹೆಸರು	ಮೊತ್ತ ರೂ ಗಳಲ್ಲಿ
1	ಜಾಮಿಯಾ ಮಸೀದಿ, ಸಬಗನಹಳ್ಳಿ, ಕೊಟಗೆರೆ ಕುಣಿಗಲ್ ತಾಲ್ಲೂಕು– ಮಸೀದಿ ಕಟ್ಟಡಕ್ಕಾಗಿ	20,000–00
2	ಅಹಲಿ ಸುನ್ನತುಲ ಮಸೀದಿ,	20,000–00

	ಅಮರತೂರು, ಕುಣಿಗಲ್ ತಾಲ್ಲೂಕು–ಮಸೀದಿ ಕಟ್ಟಡಕ್ಕಾಗಿ	
3	ಅಹ್ಲೆ ಸುನ್ನತುಲ ಜಮಾತ, ಖಬ್ರಸ್ತಾನ್, ಕೂಡಿಗೆಹಳ್ಳಿ ಅಮರತೂರು – ಖಬ್ರಸ್ತಾನ್ ಕಂಪೌಂಡ ನಿರ್ಮಾಣಕ್ಕಾಗಿ	20,000–00
4	ಇದ್ಗಾ ಮತ್ತು ಖಬ್ರಸ್ತಾನ, ಕುಣಿಗಲ್ ಟೌನ್, ಕಂಪೌಂಡ ಕಟ್ಟಡಕ್ಕಾಗಿ	20,000–00
5	ಮಕ್ಕಾ ಮಸೀದಿ ಕುರುಡಿಹಳ್ಳಿ, ಕೂಧಗೆರೆ ಹೋಬಳಿ, ಮಸೀದಿ ನಿರ್ಮಾಣಕ್ಕಾಗಿ	20,000–00
6	ಮಕ್ಕಾ ಮಸಜಿದ ಕುರುಡಿಹಳ್ಳಿ ಕೂಧಗೆರೆ ಹೋಬಳಿ ಸ ನಂ 19 ಕುಣಿಗಲ್ ತಾಲ್ಲೂಕು–ಮಸೀದಿ ಕಟ್ಟಡಕ್ಕಾಗಿ	20,000–00
	2006–07ನೇ ಸಾಲಿನ ವಿವರ	
1)	ಮಜ್ಲಿಸ್–ಎ–ಇಸ್ಲಾಮ ಖಬ್ರಸ್ತಾನ್, ಸತಮಾವತ್ತೊರ ಕುಣಿಗಲ್ ತಾಲ್ಲೂಕು – ಕಂಪೌಂಡ ಕಟ್ಟಡಕ್ಕಾಗಿ	1,00,000–00

3/49

2)	ಖಬ್ರಸ್ತಾನ ಸ ನಂ 4704, ಸತಮಾವತ್ತೊರ – ಕಂಪೌಂಡ್ ನಿರ್ಮಾಣಕ್ಕಾಗಿ	1,00,000–00
3)	ಖಬ್ರಸ್ತಾನ ಸರ್ವೆ ನಂ 7 ಗಂಗಗೊಡಿಹಳ್ಳಿ ಗ್ರಾಮ ಕೂಧಗೆರೆ, ಕುಣಿಗಲ್ ತಾಲ್ಲೂಕು	1,50,000–00
4)	ಖಬ್ರಸ್ಥಾನ್ ಹೆಚ್ ಹೊಸಹಳ್ಳಿ ಗ್ರಾಮ, ಕೂಧಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು	25,000–00

ಆ) ವಕ್ಫ ಸಂಸ್ಥೆಗಳಿಂದ ಅನುದಾನ ಬಿಡುಗಡೆಗಾಗಿ ಅರ್ಜಿ ಬಂದಂತೆ ಹಣದ ಲಭ್ಯತೆ ಆಧಾರದ ಮೇಲೆ ಅನುದಾನವನ್ನು ವಕ್ಫ ಸಂಸ್ಥೆಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗುವುದು

1484 (2201) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಕ್ಷೇತ್ರ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ತೀರಾ ಹದಗೆಟ್ಟಿರುವುದರಿಂದ ಅವುಗಳ ಅಭಿವೃದ್ಧಿಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ,

ಆ) ಹಾಗಿದಲ್ಲಿ, ಯಾವ ಅವಧಿಯೊಳಗಾಗಿ ಸದರಿ ರಸ್ತೆಗಳ ಡಾಂಬರೀಕರಣಕ್ಕೆ ಅನುದಾನ ಮಂಜೂರು ಮಾಡುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು